ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆ

**ಕರ್ನಾಟಕ ವಿಧಾನ ಪರಿಷತ್ತು**

ಸೋಮವಾರ, ದಿನಾಂಕ: 16ನೇ ಮಾರ್ಚ್, 2020

ಮಂಗಳೂರು ವಿಶ್ವವಿದ್ಯಾಲಯದ ಅವ್ಯವಹಾರದ ಕುರಿತು

ಶ್ರೀ ಎನ್. ರವಿಕುಮಾರ್ (ವಿಧಾನ ಸಭೆಯಿಂದ ಚುನಾಯಿತರಾದವರು) :-

1023 (1067) ಮಾನ್ಯ ಉಪ ಮುಖ್ಯಮಂತ್ರಿಗಳು ಹಾಗೂ ಉನ್ನತ ಶಿಕ್ಷಣ, ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ, ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಮಂಗಳೂರು ವಿಶ್ವವಿದ್ಯಾಲಯದಲ್ಲಿ 2014 ರಿಂದ ನಡೆದಿರುವ ರೂ. 100 ಕೋಟಿ ಮೊತ್ತದ ಹಗರಣಗಳ ಕುರಿತು ವಿಶೇಷ ಅಡಿಟ್ ನಡೆಸಲು ಆದೇಶಿಸಿರುವುದು ಯಾವಾಗ ;

(ಆ) ವಿಶೇಷ ಅಡಿಟ್ ತಂಡವು ಎಂದಿನಿಂದ ಕಾರ್ಯಾರಂಭ ಮಾಡಿದೆ; ಈ ಅಕ್ರಮಗಳ ಕುರಿತು ಅಡಿಟ್ ನಡೆಸಿ ವರದಿ ಸಲ್ಲಿಸಲು ಎಷ್ಟು ದಿನಗಳ ಕಾಲಮಿತಿಯನ್ನು ನಿಗದಿಪಡಿಸಲಾಗಿದೆ ;

(ಇ) 2014 ರಿಂದ ಮಂಗಳೂರು ವಿಶ್ವವಿದ್ಯಾಲಯದ ಆಯವ್ಯಯಗಳ ಸಂಪೂರ್ಣ ಲೆಕ್ಕ ಪತ್ರವನ್ನು ಪರಿಶೀಲಿಸಲಾಗುತ್ತದೆಯೇ ; ಅಥವಾ ನಿಗದಿತ ಆರೋಪಗಳ ಕುರಿತು ಆಡಿಟ್ ಅನ್ನು ಮಾಡಲಾಗುವುದೇ?